ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 747/2019

ಸಿ.ಡಬ್ಲ್ಯ್ಯೂ-1, ಪಿ.ಡಬ್ಲ್ಯ್ಯೂ-1

ದಿಃ **17.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಎಸ್ ಬಿ ನವೀನ್ ಗೌಡ |
| ಗಂಡ/ತಂದೆಯ ಹೆಸರು | ಬೆಟ್ಟಾರ್ರಾಮು |
| ವಯಸ್ಸು | 42 ವರ್ಷ |
| ಕೆಲಸ | ಪೊಲೀಸ್ ಇನ್ಸ್‌ಪೆಕ್ಟರ್ |
| ವಾಸಸ್ಥಳ | ಕುಣಿಗಲ್ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ನಾನು 20.06.2016 ರಿಂದ 23.12.2017 ರವರೆಗೆ ಬಿಳಿಕೆರೆ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ22.10.2017 ರಂದು ನಾನು ಠಾಣೆಯಲ್ಲಿದ್ದಾಗ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಚಾಸಾ8 ರವರು ಬನ್ನಿಕುಪ್ಪೆ ಗ್ರಾಮದ ಬೀಟ್ ಸಿಬ್ಬಂದಿಯಾಗಿದ್ದು, ಸದರಿಯವರು ದೂರವಾಣಿ ಮುಖಾಂತರ ನನಗೆ ಬನ್ನಿಕುಪ್ಪೆ ಗ್ರಾಮದಲ್ಲಿ ಸಿಖಂದರ್ ಎನ್ನುವವರು ಅವರ ಮನೆಯ ಮುಂದೆ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿದ ಮೇರೆಗೆ, ಅದರಂತೆ 7.10 ಕ್ಕೆ ಚಾಸಾ 4 ರಿಂದ 6 ಹಾಗೂ ಪಂಚರಾದ ಚಾಸಾ2 ಮತ್ತು 3 ರವರಿಗೆ ವಿಷಯವನ್ನು ತಿಳಿಸಿ ಅವರೊಂದಿಗೆ ಇಲಾಖಾ ಜೀಪಿನಲ್ಲಿ ಕೂರಿಸಿಕೊಂಡು ಬನ್ನಿಕುಪ್ಪೆ ಗ್ರಾಮಕ್ಕೆ ಹೋಗಿ ಸಿಖಂದರ್ ಮನೆಯಿಂದ ದೂರ ಮರೆಯಲ್ಲಿ ನಿಂತು ನೋಡಲಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡುಬಂದು, ಪಂಚರು ಹಾಗೂ ಸಿಬ್ಬಂದಿಗಳ ಸಮಕ್ಷಮ ದಾಳಿ ಮಾಡಿ ಸಿಖಂದರ್ ಅನ್ನು ವಶಕ್ಕೆ ಪಡೆದುಕೊಂಡು, ಸದರಿಯವರಿಗೆ ಯಾವುದಾದರೂ ರಹದಾರಿ ಇದೆಯಾ ಎಂದು ಕೇಳಲಾಗಿ, ಯಾವುದೂ ಇಲ್ಲ ಎಂದು ತಿಳಿಸಿ ಅವರ ಬಳಿ ಇದ್ದ ಪ್ಯಾಸ್ಟಿಕ್ ಕವರ್ ನ್ನು ಪರಿಶೀಲಿಸಿ 90 ಎಂ ಎಲ್ ನ 12 ಒರಿಜಿನಲ್ ಚಾಯ್ಸ್ ವಿಸ್ಕಿ ಪ್ಯಾಕೆಟ್ ಗಳು ಮತ್ತು 180 ಎಂ ಎಲ್ 10 ಓಲ್ಡ್ ಟವರನ್ ಪ್ಯಾಕೆಟ್ ಗಳು ಕಂಡುಬಂದಿದ್ದು, ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಅಮಾನತ್ತುಪಡಿಸಿಕೊಂಡಿದ್ದು, ಸಮಯ 7.30 ರಿಂದ 8.30 ರವರೆಗೆ ಅಮಾನತ್ತು ಮಹಜರ್ ತಯಾರಿಸಿದೆವು, ಅಲ್ಲೇ ಸ್ವಯಂ ವರದಿಯನ್ನು ತಯಾರಿಸಿ ಚಾಸಾ5 ರವರ ಮೂಲಕ ಠಾಣಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳಲು ಕಳುಹಿಸಿರುತ್ತೇನೆ. ಸಾಕ್ಷಿ ಮಹಜರ್ ನಲ್ಲಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ವಹಜರ್ ನ್ನು ನಿಪಿ1 ಹಾಗೂ ಸಾಕ್ಷಿ ಸಹಿಯನ್ನು **ನಿಪಿ1(ಎ)** ಎಂದು ಗುರುತಿಸಲಾಯಿತು. ಸ್ವವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು

ಸ್ವವರದಿಯನ್ನು ನಿಪಿ2 ಮತ್ತು ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 90 ಎಂ ಎಲ್ ನ 12 ಒರಿಜಿನಲ್ ಚಾಯ್ಸ್ ವಿಸ್ಕಿ ಪ್ಯಾಕೆಟ್ ಗಳು ಮತ್ತು 180 ಎಂ ಎಲ್ 10 ಓಲ್ಡ್ ಟವರನ್ ಪ್ಯಾಕೆಟ್ ಗಳನ್ನು ನೋಡಿ ಗುರುತಿಸಿದ್ದಾರೆ. ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

**<u>ಪಾಟೀಸವಾಲು ಆರೋಪಿತರ ಪರ ಶ್ರೀ ಎಸ್ ಎನ್ ಕೆ ವಕೀಲರಿಂದಃ</u>**

ಚಾಸಾ8 ರವರು ನಿಮಗೆ ಮಾಹಿತಿ ನೀಡಿದ್ದಾರೆಂದು ಹೇಳಿದ್ದು ಆ ಸಮಯದಲ್ಲಿ ಅವರನ್ನು ಆ ಸ್ಥಳಕ್ಕೆ ಬೀಟ್ ಗಾಗಿ ನೇಮಕವಾದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಯೇ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದರು ಎಂದು ನಿಖರವಾಗಿ ಬಾತ್ಮಿದಾರರು ತಿಳಿಸಿದ್ದರು. ನಿಪಿ2 ರಲ್ಲಿ ನೀವು ಆಸಾಮಿಯ ಹೆಸರನ್ನು ವಿಚಾರಿಸಿದಾಗ ಎಂದು ನಮೂದು ಮಾಡಿರುತ್ತೀರಿ ಎಂದರೆ ಸಾಕ್ಷಿ ಮತ್ತೊಮ್ಮೆ ಖಚಿತಪಡಿಸಿಕೊಳ್ಳಲು ವಿಚಾರಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ಪ್ರ ವ ವರದಿಯಲ್ಲಿ ಬಾತ್ಮಿದಾರರು ಯಾವ ಸಮಯದಲ್ಲಿ ದೂರನ್ನು ನೀಡಿದ್ದರು ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿ ಪ್ರ ವ ವರದಿಯನ್ನು ನಾನು ತಯಾರಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ನಿಪಿ2 ಹಾಗೂ ಮು ಮಾ 1 ಮತ್ತು 2 ನ್ನು ಚಾಸಾ5 ರವರ ಮೂಲಕ 8.30 ಗಂಟೆಗೆ ಸ್ಥಳದಿಂದ ಠಾಣೆಗೆ ಕಳುಹಿಸಿರುತ್ತೇನೆ. ನಿಪಿ2 ನ್ನು ನನ್ನ ಸಿಬ್ಬಂದಿರವರು ತಯಾರಿಸಿರುತ್ತಾರೆ. ನಾನು ಹಾಗೂ ಸಿಬ್ಬಂದಿಯವರು ಠಾಣೆಯಿಂದ ಹೊರಟ ಬಗ್ಗೆ ದಿನಚರಿ ಪುಸ್ತಕದಲ್ಲಿ ನಮೂದು ಮಾಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಿನಚರಿ ಪುಸ್ತಕದಲ್ಲಿ ಉದ್ದೇಶವನ್ನು ನಮೂದು ಮಾಡಿರುತ್ತೀರಿ ಎಂದರೆ ಸರಿ. ನಾವು ಠಾಣೆಯಿಂದ ನೇರವಾಗಿ ಸ್ಥಳಕ್ಕೆ ಹೋದೆವು. ನಾನು ಪಂಚರಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಿಪಿ1 ರಲ್ಲಿ ಮು ಮಾ 1 ಮತ್ತು 2 ರ ಬ್ಯಾಚ್ ನಂಬರ್, ಸೀರಿಯಲ್ ನಂಬರ್ ಹಾಗೂ ತಯಾರಾದ ದಿನಾಂಕ ನಮೂದು ಮಾಡಿರುವುದಿಲ್ಲ. ಮು ಮಾ 1 ಮತ್ತು 2 ರ ಬ್ಯಾಚ್ ನಂಬರ್, ಸೀರಿಯಲ್ ನಂಬರ್ ಹಾಗೂ ತಯಾರಾದ ದಿನಾಂಕ ವನ್ನು ಪ್ರತ್ಯೇಕವಾಗಿ ನಮೂದು ಮಾಡಿರುವುದಿಲ್ಲ.

ನಿಪಿ2 ನ್ನು ದಾಳಿ ಮಾಡುವ ಮುನ್ನವೇ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಬಾತ್ಮಿದಾರರಿಂದ ಮಾಹಿತಿ ಪಡೆದ ನಂತರ ನೀವು ಯಾವುದೇ ಕ್ರಮ ಕೈಗೊಳ್ಳದೇ ನೇರವಾಗಿ ನಿಪಿ1 ನ್ನು ತಯಾರಿಸಿರುತ್ತೀರಿ

ಎಂದರೆ ಸರಿಯಲ್ಲ. ಸ್ಥಳಕ್ಕೆ ಹೋಗುವ ಮುನ್ನವೇ ಅಮಾನತ್ತು ಮಹಜರ್ ಗೆ ಬೇಕಾಗುವ ವಸ್ತುಗಳನ್ನು ನಾವು ತೆಗೆದುಕೊಂಡು ಹೋಗಿರುತ್ತೇವೆ. ನಿಪಿ1 ಮತ್ತು 2ನ್ನು ನೀವು ಠಾಣೆಯಲ್ಲಿಯೇ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ1ಕ್ಕೆ ಚಾಸಾ2 ಮತ್ತು 3ರವರ ಸಹಿಗಳನ್ನು ಠಾಣೆಯಲ್ಲಿ ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಿಪಿ1 ಮತ್ತು 2ನ್ನು ಠಾಣೆಯಲ್ಲಿಯೇ ತಯಾರಿಸಿ ಮುಂದಿನ ಕ್ರಮವನ್ನು ಕೈಗೊಂಡಿರುತ್ತೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.